## ಕಳೆದ ಸಂಚಿಕೆಯಲ್ಲಿ



ಪುಂಡರ ಬೆದರಿಕೆ ಪ್ರಕರಣದ ತನಿಖೆಗಾಗಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಶ್ರೀನಿವಾಸರಾಯರ ಮನೆಗೆ ಬಂದು ಸ್ಥಳ ಪರಿಶೀಲನೆ ನಡೆಸಿಹೋದರು. ಸರೋಜಮ್ಮನವರಿಗೆ ತಮ್ಮ ಅಣ್ಣನನ್ನು ನೋಡುವ ಮನಸ್ಸಾದಾಗ, ತಕ್ಷಣವೇ ಹೊರಡಲು ಶ್ರೀನಿವಾಸರಾಯರೂ ಉದ್ಯುಕ್ತರಾದರು. ಸರೋಜಮ್ಮನವರ ಅಣ್ಣ ಸುಧೀರ್ ಶೆಟ್ಟರು, ಮಿಲಿಟರಿಯಲ್ಲಿ ಸೇವೆ ಸಲ್ಲಿಸಿ ಬಂದವರು. ಅಪ್ಪನ ಆಸ್ತಿಯ ಬಗ್ಗೆ ಆಸೆಪಡದ ಶೆಟ್ಟರು, ಆಸ್ತಿಯನ್ನೆಲ್ಲ ತಂಗಿಯರಿಗೆ ಬಿಟ್ಟು, ಸರ್ಕಾರದಿಂದ ತಮಗೆ ದೊರೆತ ಭೂಮಿಯಲ್ಲಿ ಕೃಷಿ ಮಾಡತೊಡಗಿದರು. ಆತ್ಮಸಂತೃಪ್ತಿಗಾಗಿ ಕೃಷಿಯಲ್ಲಿ ತೊಡಗಿದ ಅವರು, ತಮ್ಮ ನಂತರ ಸರ್ಕಾರದಿಂದ ಬಂದ ಭೂಮಿ ಸರ್ಕಾರಕ್ಕೇ ಹೋಗಬೇಕು ಎಂದು ಬಯಸಿದರು. ಶೆಟ್ಟರನ್ನು ನೋಡಲು ಪತ್ನಿಯೊಂದಿಗೆ ಹೊರಟ ಶ್ರೀನಿವಾಸರಾಯರು, ಜೊತೆಯಲ್ಲಿ ತಮ್ಮ ಸ್ನೇಹಿತರಾದ ಸದಾಶಿವ ಅವರನ್ನೂ ಕರೆದುಕೊಂಡರು. ಆ ಭೇಟಿ ನಂತರ ಹಿಂತಿರುಗಿದ ಅವರು, ರಾಂಪುರಕ್ಕೆ ಹೋಗಿ ಜಯಂತಿಯನ್ನು ಭೇಟಿಯಾಗಲು ನಿರ್ಧರಿಸಿದರು.

ಬೇಕಾದರೂ ಅಲ್ಲಿ ಕೂರಿ, ಒಂದು ವರ್ಷ ಬೇಕಾದರೂ ಇರಿ! ನಾನು ಸತ್ತೆ ಎಂದು ನಿಮಗೆ ಸುದ್ದಿ ಬಂದಾಗ ಇಲ್ಲಿಗೆ ಹೊರಟು ಬಂದು ನನ್ನ ದಹನ ನಡೆಸಿದರೆ ಸಾಕು' ಎಂದರು.

ಯಾವತ್ತೂ ಹೆಂಡತಿ ಜೊತೆ ಸಿಟ್ಟಿನಲ್ಲಿ ಮಾತನಾಡದ ರಾಯರು ಸ್ವಲ್ಪ ಗಂಭೀರವಾಗಿ, 'ನಿನಗೆ ಆ ಜಯಂತಿ ಮೇಲೆ ಕಣ್ಣು! ನಾನು ಅಲ್ಲೇ ಬಿದ್ದು ಸಾಯುತ್ತೇನೆಯೋ ಎಂದು! ಈ ವಯಸ್ಸಿನಲ್ಲಿ ನಾನು ಅಂಥಾದ್ದು ಏನು ಮಾಡಲು ಸಾಧ್ಯ?' ಎಂದು ಹರಿಹಾಯ್ದರು.

ಸರೋಜಮ್ಮ ಮಾತು ಮುಂದುವರಿಸಲಿಲ್ಲ.

ರಾತ್ರೆ ಒಂಬತ್ತು ಗಂಟೆಗೆ ರಾಯರ ಕಾರಿನ ಡ್ರೈವಿಂಗ್ ಸೀಟಿನಲ್ಲಿ ಕುಳಿತ ಸದಾಶಿವ ಶೆಟ್ಟರು 'ಡ್ರೈವ್ ಮಾಡದೆ ಬಹಳ ದಿನಗಳಾದುವು ಎಂದು ಸಣ್ಣ ಅಳುಕು ಆಗುತ್ತಿದೆ' ಎಂದರು.

'ಇಲ್ಲ, ನೀವು ಕೇರ್‌ಫುಲ್ಲಾಗಿ ಡ್ರೈವ್ ಮಾಡುವವರು. ನಿಧಾನ ಹೋಗೋಣ ಬಿಡಿ' ಎಂದರು ರಾಯರು. ಸರೋಜಮ್ಮ ಒಲ್ಲದ ಮನಸ್ಸಿನಿಂದ ಬಾಗಿಲಲ್ಲಿ ನಿಂತು ಗಂಡನನ್ನು ಬೀಳ್ಕೊಟ್ಟರು. ರಾಯರು ಕಾರಿನೊಳಗಿನಿಂದ ಕೈ ಹೊರಗೆ ಹಾಕಿ 'ಬೈ ಬೈ' ಎಂದರು.

ಕಾರ್ಕಳ ಬಸ್ ಸ್ಟ್ಯಾಂಡಿಗೆ ಬಂದು ಇಬ್ಬರೂ ಬಸ್ ಕಾಯುತ್ತಾ ಕುಳಿತಿರುವಾಗ ರಾಯರ ಮೊಬೈಲ್ ರಿಂಗಣಿಸಿತು. ರಾಯರು ಆನ್ ಮಾಡಿದರೆ ಆ ಕಡೆಯಿಂದ 'ಸರ್. ನಮಸ್ಕಾರ, ನಾನು ಶಿವರಾಮ ಶೆಟ್ಟಿ, ಸ್ಟೇಶನ್ನಿನಿಂದ ಮಾತನಾಡುತ್ತಿದ್ದೇನೆ' ಎಂಬ ಮಾತು ಕೇಳಿಸಿತು. ರಾಯರು 'ಎಸ್, ಪ್ಲೀಸ್' ಎಂದರು. ಎಸ್.ಐ. ಶೆಟ್ಟರು 'ನೀವು ದಾಖಲು ಮಾಡಿದ ಕೇಸಿನ ವಿಚಾರ ಒಂದು ಕ್ಲೂ ಸಿಕ್ಕಿದೆ ಸರ್. ಇನ್ನೆರಡು ದಿನಗಳಲ್ಲಿ ಅದರ ಸ್ಪಷ್ಟ ಚಿತ್ರಣ ಗೊತ್ತಾಗುತ್ತದೆ. ಆಗ ನೀವೊಮ್ಮೆ ಸ್ಟೇಶನ್ನಿಗೆ ಬರಬೇಕಾಗುತ್ತದೆ' ಎಂದರು.

'ಹೌದಾ? ವೆರಿಗುಡ್ ಅದೇನು ಕ್ಲೂ ಸಿಕ್ಕಿದ್ದು?'

'ನಿಮ್ಮ ಅಂಗಳದಿಂದ ಆ ರೌಡಿಗಳು ಫೋನು ಮಾಡಿದ್ದಾರೆ ಎಂಬುದನ್ನು ನೀವು ಕಂಪ್ಲೇಂಟಿನಲ್ಲಿ ದಾಖಲಿಸಿದ್ದೀರಿ ತಾನೇ? ಆ ಆಧಾರದಲ್ಲಿ ನಾವು ಕಾಲ್ ರಿಜಿಸ್ಟರನ್ನು ಕಲೆಕ್ಟ್ ಮಾಡಿದಾಗ ಆ ರೌಡಿ ಗಳು ನಿಮ್ಮ ಅಂಗಳದಿಂದ ಆ ಫೋನ್ ಕಾಲ್ ಮಾಡಿದ್ದು ರಾಂಪುರಕ್ಕೆ ಎಂದು ಗೊತ್ತಾಗಿದೆ. ಅಲ್ಲಿ ಫೋನು ರಿಸೀವ್ ಮಾಡಿದವರು ಯಾರು? ಅವರ ಹಿನ್ನೆಲೆ ಏನು ಎಂದು ಇನ್ನೂ ಗೊತ್ತಾಗಬೇಕು! ಇದನ್ನು ನೋಡಿದರೆ ಇದು ಭಾಷಣದ ವಿಚಾರಕ್ಕಾಗಿ ನಿಮ್ಮನ್ನು ಬೆದರಿಸಲು ಬಂದವರೇ ಅಲ್ಲ. ಮತ್ತೆ ಯಾಕೆ ಎನ್ನುವುದು ಮುಂದೆ ಗೊತ್ತಾಗುತ್ತದೆ ಬಿಡಿ' ಎಂದರು.

'ಗುಡ್ ಗುಡ್! ನಿಮ್ಮ ಸಾಧನೆಗೆ ಕಂಗ್ರಾಟ್ಸ್. ಬಟ್ ನಾನು ಒಂದು ವಾರ ಊರಲ್ಲಿರುವುದಿಲ್ಲ ಶೆಟ್ಟರೇ. ಈಗ ನಾನು ರಾಂಪುರಕ್ಕೆ ಹೊರಟಿದ್ದೇನೆ. ಆ ಸದಾಶಿವ ಶೆಟ್ಟರನ್ನು ನಾಳೆ ಅಥವಾ ನಾಡಿದು ನಿಮ್ಮ ಆಫೀಸಿಗೆ ಕಳುಹಿಸುತ್ತೇನೆ'.

'ಓ.ಕೆ. ಸರ್. ಡೋಂಟ್ ವರಿ. ಪ್ರಕೃತ ನನಗೆ ನಿಮ್ಮ ಅವಶ್ಯಕತೆ ಇದ್ದರೂ ನೀವು ಹೋಗಿ ಬನ್ನಿ. ಬಟ್ ಶೆಟ್ಟರನ್ನು ನೀವು ಸದ್ಯ ನಮ್ಮ ಕಚೇರಿಗೆ ಕಳುಹಿಸಬೇಕೆಂದೂ ಇಲ್ಲ'.

ರಾಯರು ಸಣ್ಣಗೆ ನಗುತ್ತಾ 'ಶೆಟ್ಟರೇ, ನಿಜ ಹೇಳಬೇಕಾದರೆ ಸದಾಶಿವ ಶೆಟ್ಟರಿಗೆ ನನಗಿಂತ ಹೆಚ್ಚು ಈ ಕೇಸಿನಲ್ಲಿ ಇಂಟರೆಸ್ಟು' ಎಂದರು.

ಆ ಕಡೆಯಿಂದ ಎಸ್.ಐ. ಶೆಟ್ಟರು 'ಎಸ್ ಸರ್, ಗುಡ್ ನೈಟ್' ಎಂದು ಫೋನು ಕಟ್ ಮಾಡಿದರು.

ಈ ಸಂಭಾಷಣೆಯನ್ನು ಕೇಳುತ್ತಿದ್ದ ಸದಾಶಿವ ಶೆಟ್ಟರು 'ಏನದು ವಿಚಾರ? ಕ್ಲೂ ಸಿಕ್ಕಿತು ಅಂತ ಮಾತನಾಡುತ್ತಿದ್ದರಲ್ಲ? ಸ್ಟೇಶನ್ನಿನ ಫೋನಾ?' ಎಂದು ವಿಚಾರಿಸಿದರು.

ರಾಯರು ತನ್ನ ಮತ್ತು ಎಸ್.ಐ. ಅವರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ, 'ರಾಂಪುರಕ್ಕೆ ಇಲ್ಲಿಂದ ಆ ರೌಡಿಗಳ ಫೋನು ಹೋಗಿದೆ ಅಂದರೆ ಬಹಳ ಆಶ್ಚರ್ಯವಲ್ಲವೇ?' ಎಂದರು.

ಶೆಟ್ಟರು ಎರಡು ನಿಮಿಷ ಮೌನವಾದರು. 'ಮೊನ್ನೆ ನನ್ನ ಅಣ್ಣ ಊರಿಗೆ ಬಂದಿದ್ದ. ಅವನು ನಮ್ಮ ಹೈಸ್ಕೂಲಿನ ಅಭಿವೃದ್ಧಿ ಸಮಿತಿಯಲ್ಲಿ ಏನೋ ಒಂದು ಹುದ್ದೆಯಲ್ಲಿದ್ದಾನೆ ಅಂತ ಕಾಣುತ್ತದೆ. ನಿಮ್ಮನ್ನು ಭಾಷಣಕ್ಕೆ ಕರೆದದ್ದಕ್ಕೆ ಆತ ಬೇಸರ ವ್ಯಕ್ತಪಡಿಸಿ, ಹೈಸ್ಕೂಲಿನ ಹೆಡ್ಮಾಸ್ಟರರಲ್ಲಿ 'ನಾಸ್ತಿಕರನ್ನು ಬುದ್ಧಿಜೀವಿಗಳು ಅನಿಸಿಕೊಂಡವರನ್ನು ಯಾಕೆ ಇಂಥ ಸಮಾರಂಭಕ್ಕೆ ಆಹ್ವಾನಿಸುವುದು?' ಎಂದು ಆಕ್ಷೇಪ ವ್ಯಕ್ತಪಡಿಸಿದ್ದ ಎನ್ನುವುದು ಶಾಲೆಯ ಅಟೆಂಡರ್ ಲಿಂಗಪ್ಪನಿಂದ ನಾನು ಕೇಳಿಸಿಕೊಂಡಿದ್ದೆ. ಅದನ್ನು ಆತ ನನಗೆ ಹೇಳಿದ್ದರೂ ನಾನು ಲಿಂಗಪ್ಪನ ಮಾತುಗಳನ್ನು ಆಗ ಕಿವಿಗೆ ಹಾಕಿಕೊಳ್ಳಲಿಲ್ಲ. ಲಿಂಗಪ್ಪನಿಗೆ ನನ್ನ ಬಗ್ಗೆ ಪ್ರೀತಿ ಗೌರವ ಇದೆ. ಅವನಿಗೆ ನನಗೂ ನನ್ನಣ್ಣನಿಗೂ ನಮ್ಮ ಜಮೀನಿನ ವಿಚಾರದಲ್ಲಿ ಸಣ್ಣ ಪುಟ್ಟ ತಕರಾರು ಇದೆ ಎನ್ನುವುದು ಗೊತ್ತಿದೆ. ಅದಕ್ಕಾಗಿಯೇ ಆತ ಈ ವಿಷಯವನ್ನು ನನ್ನನ್ನು ಮೆಚ್ಚಿಸಲಿಕ್ಕೆ ಹೇಳಿರಬಹುದು ಎಂದುಕೊಂಡಿದ್ದೆ. ಈಗ ನೋಡಿದರೆ ನೀವು ಮತ್ತು ನಾನು ಈ ಊರಲ್ಲಿ ಒಟ್ಟಿಗೇ ಇರುವುದು ಮತ್ತು ನೀವು ನಾನು ಈ ಊರಿನಿಂದ ಹೋಗಬಾರದು ಎಂಬಂತೆ ನನಗೆ ನೈತಿಕ ಬೆಂಬಲಕ್ಕಿರುವುದು ನನ್ನಣ್ಣನಿಗೆ ಗೊತ್ತಾಗಿರಬಹುದು ಎಂದು ಕಾಣುತ್ತದೆ. ನಿಮ್ಮನ್ನು ಈ ಊರಿಂದ ಹೆದರಿಸಿ ಬೆದರಿಸಿ ಓಡಿಸಿದರೆ ಮುಂದೆ ನಾನು ಅಣ್ಣನಿಗೆ ಶರಣಾಗುತ್ತೇನೆ ಎನ್ನುವುದು ನನ್ನ ಅಣ್ಣನ ತರ್ಕ ಇರಬಹುದೇ ಎಂಬ ಗುಮಾನಿ ನನಗಿದೆ' ಎಂದರು.

ರಾಯರಿಗೆ 'ನಿಮ್ಮ ಅಣ್ಣ ಇಷ್ಟು ಧೂರ್ತರೇ?' ಎಂದು ಕೇಳಬೇಕೆನಿಸಿತು. ಅದನ್ನು ಕೇಳಲಾಗದ ಅವರು, 'ಸರಿ ಶೆಟ್ಟರೇ, ಆದರೆ ಒಂದು ವಿಚಾರ ತಪ್ಪಿಯೂ ಈ ವಿಚಾರವನ್ನು ನೀವು ನನ್ನ ಹೆಂಡತಿಗೆ ಹೇಳಬೇಡಿ. ಯಾಕೆಂದರೆ ಆಕೆ ಇನ್ನೇನೇನೋ ಅರ್ಥಮಾಡಿಕೊಳ್ಳುತ್ತಾಳೆ. ನಾನಂತೂ ಐಸ್.ಐ. ಅವರ ಮಾತಿನಿಂದ ಊರು ಬಿಡುವ ವಿಚಾರವನ್ನೇ ಮರೆತು ಬಿಡುತ್ತೇನೆ' ಎಂದರು.

ಅಷ್ಟರಲ್ಲಿ ಬಸ್ಸು ಹೊರಡುವ ಹೊತ್ತಾಯಿತು ಎಂದು ಡ್ರೈವರ್ ಬಂದು ಡ್ರೈವಿಂಗ್ ಸೀಟಿನಲ್ಲಿ ಕುಳಿತ, ಗಾಡಿ ಸ್ಟಾರ್ಟ್ ಮಾಡಿದ ಆತ ಎರಡು ಹಾರ್ನ್ ಹೊಡೆದ. ರಾಯರು ಕಾರಿನಿಂದ ಬಸ್ಸಿದ್ದಲ್ಲಿಗೆ ನಡೆದು ಹೋಗಿ ಬಸ್ಸಿನ ಮೆಟ್ಟಲೇರಿದರು. ಅಲ್ಲಿಂದಲೇ ಅವರು ಬಾಗಿ ಶೆಟ್ಟರಿಗೆ 'ಬೈ ಬೈ' ಹೇಳಿ, ತಮ್ಮ 'ಸೀಟು ಎಲ್ಲಿ?' ಎಂದು ಹುಡುಕಿ ಸೀಟು ಹಿಡಿದು ಕುಳಿತರು.

***

### ಭಾಗ – ಎರಡು

ಬೆಳಗ್ಗಿನ ಉಪಾಹಾರ ಮುಗಿಸುವ ನಡುವೆ ಶ್ರೀನಿವಾಸರಾಯರಿಂದ ಬಂದ ಫೋನು ಕರೆಯನ್ನು ಸ್ವೀಕರಿಸಿದ ಜಯಂತಿ ಕುಲಕರ್ಣಿ, 'ಅಣ್ಣ, ಒಂದೇ ನಿಮಿಷದಲ್ಲಿ ಕೈ ತೊಳೆದು ಬಂದುಬಿಡುತ್ತೇನೆ. ತಿಂಡಿ ಈಗಷ್ಟೇ ಆಯಿತು' ಎಂದು ಮೊಬೈಲನ್ನು ಡೈನಿಂಗ್ ಟೇಬಲ್ಲಿನಲ್ಲಿ ಇಟ್ಟು ಕೈತೊಳೆದು ಬಂದು 'ಈಗ ಹೇಳಿ ನೀವು ಯಾವಾಗ ಬರುವುದು ಈ ಕಡೆಗೆ?' ಎಂದು ಪ್ರಶ್ನಿಸಿದಳು.

ರಾಯರು 'ನಾನು ಈ ರಾತ್ರೆ ಹೊರಡುತ್ತಿದ್ದೇನೆ ಜಯಂತಿ. ಹತ್ತೂವರೆಗೆ ಕಾರ್ಕಳದಿಂದ ರಾಂಪುರಕ್ಕೆ ಬಸ್ಸಿದೆ. ಅದು ರಾಂಪುರದ ಮೂಲಕ ಶಿವಪುರಕ್ಕೆ ಹೋಗುವ ಬಸ್ಸಂತೆ. ಎಷ್ಟು ಹೊತ್ತಿಗೆ ಅದು